Sri GANGA BOVI.—I have moved a privilege motion.

Mr. SPEAKER.—I shall take up that motion to-morrow. The hon. Member had come to my chambers for personal discussion; then I have asked for some further information from him. After I get that information, I shall give my decision on the motion.

ARRANGEMENT OF SEPARATE LOBBY FOR PRESS

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಈ ಶಾಸನ ಸಭಾ ಭವನದಲ್ಲಿ ಲಾಬಿಗಳನ್ನು ಪುನರ್‌ವ್ಯವಸ್ಥೆ ಮಾಡತಕ್ಕ ಕಾಲದಲ್ಲಿ, ಮತ್ತು ಪ್ರೆಸ್‌ಲಾಬಿ ವ್ಯವಸ್ಥೆ ಮಾಡತಕ್ಕ ಕಾಲದಲ್ಲಿ ಏನೆರ್ಲಾ ನಡೆದಿದೆಯೋ, ಇದಕ್ಕೆ ಎಲ್ಲಾ ನಾವು, ವಿರೋಧಪಕ್ಷದವರು ಕಾರಣವೆಂದು ಒಂದು ಭಾವನೆ ಬಂದಿದೆ. ಅವರಿಗೆ ಬೇರೆ ಲಾಬಿ ಮಾಡತಕ್ಕ ಕೆಲಸವು ವಿರೋಧ ಪಕ್ಷದವರು ಮಾಡಿದ್ದು, ನಮಗೆ ತೊಂದರೆಯಾಗುತ್ತದೆಂದು, ಅವರಿಗೆ ಬೇರೆ ಲಾಬಿ ಮಾಡಬೇಕೆಂದು ನಾವು ಮಾಡಿದ್ದು ಎಂಬುದು ಒಂದು ಪಿಸಿ ಪಿಸಿ ಮಾತು ನಡೆದಿದೆ. ಇದು ವಿರೋಧಪಕ್ಷದವರು ಹೇಳಿಸಿ ಬೇರೆ ಮಾಡಿ ಎಂದು ಹೇಳಿದಂತೆ ಒಂದು ವಾತಾವರಣ ಇಲ್ಲಿ ಉಂಟಾಗಿದೆ. ನಿಜವಾಗಿಯೂ ವಿರೋಧಪಕ್ಷದವರಿಗೂ ಪ್ರೆಸ್ಸಿನವರಿಗೂ ನಿಕಟ ಸಂಬಂಧ ಇದೆ. ಅವರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ, ಅವರ ಬಗ್ಗೆ ನಮಗೆ ತೊಂದರೆಯಾಗುತ್ತದೆ ಎಂದು ಯಾರೂ ವ್ಯಕ್ತಪಡಿಸಿಲ್ಲ. ನಮಗೆ ಅವರು ಯಾವಾಗಲೂ ಜೊತೆಗೆ ಇರತಕ್ಕದ್ದು ಬಹಳ ಸಂತೋಷಕರವಾದುದು. ಅಂಥ ಭಾವನೆ ಯಾರಲ್ಲಿ ಯಾದರೂ ಇದ್ದರೆ, ಅದನ್ನು ತೊಡೆದುಹಾಕಬೇಕು. ನಮಗೆ ಅವರು ಯಾವಾಗಲೂ ಸಹಕಾರಿಯಾಗುತ್ತಾರೆ. ಸರ್ಕಾರವೇ, ಆಗಲಿ, ಅಥವಾ ಇನ್ನಿತರ ಯಾವ ಮಂತ್ರಿಯವರು ಯಾರೇ ಆಗಲಿ, ಆ ರೀತಿ ಒಂದು ತಪ್ಪು ಅಭಿಪ್ರಾಯವನ್ನು ತಾಳಿದ್ದರೆ, ಅದು ತಪ್ಪು ಎಂದು ನಾನು ಹೇಳುತ್ತೇನೆ. ಸರ್ಕಾರದವರು ಇದನ್ನು ಸ್ಪಷ್ಟಪಡಿಸಬೇಕು. ಈ ಅನುಮಾನ ನಮ್ಮ ಕಡೆಯಿಂದ ನಡೆದಿಲ್ಲ. ಪ್ರೆಸ್ಸಿನವರು ಮುಂದೆ ಕೂಡ ನಮ್ಮ ಮಿತ್ರರು,-ಇಂದೂ ಕೂಡ ನಮ್ಮ ಮಿತ್ರರು. ನಮಗೆ ಅವರಿಂದ ಬಹಳ ಸಹಾಯವಾಗಿದೆ, ಇನ್ನು ಮುಂದೆಯೂ ಆಗುತ್ತದೆ. ಆದ್ದರಿಂದ ಇದು ನಮ್ಮ ಕಡೆಯಿಂದ ಏನೂ ನಡೆದಿಲ್ಲವೆಂದು ಸ್ಪಷ್ಟಪಡಿಸಬೇಕಾಗಿದೆ.

† Sri H. SIDDAVEERAPPA (Harihar).—Sir, I want to add a word or two to what my leader has said. So far as the Press is concerned, we on this side have held them in the highest esteem on all occasions. I am one of those who believe that for the proper working of democracy, the Press has to play its important role; that is why, it is called the Fourth Estate in a democracy. I did not know what was taking place for the last few days regarding this matter. I was simply observing. I was so sorry when I found my friends of the Press were feeling a sort of sullenness at a mistaken impression that we on this side did not want to have them. Far from it. In fact, we always enjoyed their company. We were so happy with them. Even now, I would invite them to share whatever privileges we on this side have. But let it not go on record that we did not like their company or that we did not want them to be with us. Some arrangement that has been thought of to shift them, is not to our liking. Therefore, we, on this side, feel that some Minister or Deputy Minister on some occasion whispered into the ears of the members of the Press that we raised objection and that some of us carried tales against them to the Chief Minister. I do not think that any one of us on this side has done it. If anybody has done, we are prepared to make

proper amends for it. So far as we are concerned, let it go on record that we have nothing but the highest goodwill so far as the Press is concerned.

†ಶ್ರೀ ಕೆ. ಪುಟ್ಟಸ್ವಾಮಿ (ಕಾರ್ಮಿಕ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ, ಈ ವಾತಾವರಣ ಉಂಟಾಗಿರುವುದಕ್ಕೆ ನಾನು ತುಂಬಾ ವಿಷಾದಪಡುತ್ತೇನೆ. ಈ ಸಭೆಯ ಕಾರ್ಯಕಲಾಪಗಳು ಪರಿಣಾಮಕಾರಿಯಾಗಿ ನಡೆಯಬೇಕಾದರೆ ಆಡಳಿತ ಪಕ್ಷ ಮತ್ತು ವಿರೋಧಪಕ್ಷ ಹೇಗೆ ಅವಶ್ಯಕವೋ ಹಾಗೆ ಈ ಸಭೆಯಲ್ಲಿ ನಮ್ಮ ಪ್ರೆಸ್ ಮಿತ್ರರು ಇರುವುದೂ ಕೂಡ ಅವಶ್ಯಕ. ಇಲ್ಲದಿದ್ದರೆ ಈ ದೇಶದಲ್ಲಿರತಕ್ಕ ಜನರು ಈ ಸಭೆಯಲ್ಲಿ ಕಾರ್ಯಕಲಾಪಗಳು ಯಾವ ಮಟ್ಟದಲ್ಲಿ ನಡೆಯುತ್ತವೆ, ಯಾವ ಒಂದು ಉದ್ದೇಶದಿಂದ ನಡೆಯುತ್ತವೆ, ಅವರ ಹಿತರಕ್ಷಣೆ ಮಾಡುವುದಕ್ಕೆ ಅವರ ಪ್ರತಿನಿಧಿಗಳು ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದೇ ತಿಳಿಯುವುದಿಲ್ಲ. ಈ ರಾಜಿಯ ಪೂರ್ವಾವಸ್ಥೆಯಲ್ಲಿ ಈಗಲಾದರೂ ಪ್ರೆಸ್‌ನವರಿಗೋಸ್ಕರ ಒಂದು ಪ್ರತ್ಯೇಕ ರಾಜಿ ಇರಬೇಕೆಂದಷ್ಟೇ. ಅವರು ವಿರೋಧಪಕ್ಷದ ರಾಜಿಗೆ ಹೋಗುವುದಕ್ಕಾಗಲಿ ಅಥವಾ ನಮ್ಮ ಪಕ್ಷದ ರಾಜಿಗೆ ಬರುವುದಕ್ಕಾಗಲೀ ಯಾವ ಅಡ್ಡಿ ಆತಂಕವೂ ಇಲ್ಲ. ಈ ಮಧ್ಯೆ ಇಲ್ಲದೇ ಇರತಕ್ಕ ಮಾತು ಅಲ್ಲಿ ಇಲ್ಲಿ ಬಂದು ನಮ್ಮ ಪಕ್ಷದ ಕೆಲವರ ಮನಸ್ಸು ನೋವಾಗಿದೆ ಹಾಗೂ ವಿರೋಧಪಕ್ಷದ ಕೆಲವರ ಮನಸ್ಸೂ ನಹ ನೋವಾಗಿರಬಹುದು. ಅದರಲ್ಲಿ ಯಾರವಾದರೂ ಯಾವ ಒಂದು ಬೇರೆ ಉದ್ದೇಶವೇನೂ ಇಲ್ಲ. ಇದರಲ್ಲಿ ಒಬ್ಬರ ಮೇಲೊಬ್ಬರು ಎತ್ತಿ ಕಟ್ಟುತಕ್ಕ ಮನೋಭಾವ ಯಾರಿಗೂ ಇಲ್ಲ. ಒಂದುವೇಳೆ ಆ ರೀತಿಯ ಮನೋಭಾವ ಯಾರಿಗಾದರೂ ಬಂದಿದ್ದರೆ ಅದನ್ನು ಬಿಡಬೇಕು. ಸರ್ಕಾರದವರು ನಮಗೆ ಅಂದರೆ ಆಡಳಿತ ಪಕ್ಷಕ್ಕೆ ಮತ್ತು ವಿರೋಧಪಕ್ಷಕ್ಕೆ ವ್ಯವಸ್ಥಿತವಾದ ಒಂದು ರಾಜಿ ಅಥವಾ ನ್ಯಥಳವನ್ನು ಒದಗಿಸಿಕೊಟ್ಟಿದ್ದಾರೋ ಅದೇ ರೀತಿಯಾಗಿ ಪ್ರೆಸ್‌ನವರಿಗೂ ಇರಬೇಕು. ಅವರು ಯಾವ ಕಡೆ ಹೋಗಬೇಕಾದರೂ ಅಡ್ಡಿ ಇಲ್ಲ, ಆಪತ್ತಣೆ ಇಲ್ಲ. ಈ ಸಭಾ ಕಾರ್ಯಕಲಾಪಗಳ ದೃಷ್ಟಿಯಿಂದ ಇದನ್ನು ನೋಡುವುದಾದರೆ ಸಭಾ ಸದಸ್ಯರಿಗೆ ಎರಡು ರಾಜಿಗಳಲ್ಲಿಯೂ ಹೋಗಿಬರುವುದಕ್ಕೆ ಏನೇನು ಅನುಕೂಲಗಳಿವೆಯೋ ಅಷ್ಟೇ ಸೌಲಭ್ಯಗಳು ಅವರಿಗೂ ಇರಬೇಕೆಂದು ನನ್ನ ಅಭಿಪ್ರಾಯ. ಆದ್ದರಿಂದ ಈ ರೀತಿಯಾಗಿ ವಿಷಾದಕರವಾದಂಥ ವಾತಾವರಣ ಕಲ್ಪನೆಯಾಗುವುದಕ್ಕೆ ಅವಕಾಶವಾದುದಕ್ಕೆ ನಾನು ತುಂಬಾ ವಿಷಾದಪಡಬೇಕಾಗುತ್ತದೆ. ನಾನು ಈ ಸಭಾ ಸದಸ್ಯರಲ್ಲಿ ಇನ್ನೊಂದು ವಿಚಾರವನ್ನು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಈ ವಿಚಾರವನ್ನು ಇನಃ ಈ ಸಭೆಯಲ್ಲಿ ಪ್ರಸ್ತಾಪಮಾಡಬಾರದೆಂದು ನಾನು ಹೇಳುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಪ್ರಶ್ನೆಗಳ ವಿಚಾರದಲ್ಲಿ ತಮ್ಮ ಗಮನವನ್ನು ಸೆಳೆಯುತ್ತೇನೆ. ಇವತ್ತಿನ ದಿವಸದಲ್ಲಿ 15 ಪ್ರಶ್ನೆಗಳ ಪೈಕಿ ಕೇವಲ 8 ಪ್ರಶ್ನೆಗಳಾದುವು. ಅದರಲ್ಲಿಯೂ 603 ನೇ ಪ್ರಶ್ನೆ ಮಾನ್ಯ ಶ್ರೀ ಚಂದ್ರಕಾಂತ್ ಅವರದು ಆಗಿ ಅದಕ್ಕೆ ಹೆಚ್ಚುಯಾರಿಟಿ ಕೊಟ್ಟಿದ್ದರಿಂದ ನನ್ನ ಪ್ರಶ್ನೆ ಲ್ಯಾಪ್ಸ್ ಆಗಿದೆ. ದಯವಿಟ್ಟು ಇನ್ನುಮುಂದೆ 10 ಪ್ರಶ್ನೆಗಳಿಗಿಂತ ಜಾಸ್ತಿ ಇಟ್ಟುಕೊಳ್ಳಬೇಡಿ. ಆಗ ಎಲ್ಲಾ ಪ್ರಶ್ನೆಗಳನ್ನು ಮುಗಿಸಬಹುದು. ಪ್ರತಿ ದಿವಸವೂ ಬಂದಂಥ ಎಲ್ಲ ಪ್ರಶ್ನೆಗಳನ್ನೂ ಮುಗಿಸುವುದಕ್ಕೆ ಪ್ರಯತ್ನಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಬೆಂಗಳೂರು ಕಾರ್ಪೊರೇಷನ್ ಇಲೆಕ್ಷನ್ ಬಗ್ಗೆ ನಾನು, ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರು, ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು, ಮತ್ತು ಮಾನ್ಯ ಶ್ರೀ ಪಿ. ತಿಮ್ಮಯ್ಯನವರೂ ಸೇರಿ ತಮಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ನನ್ನು ಕೊಟ್ಟಿದ್ದೆವು. ಮೊನ್ನೆ ಅದರ ಬಗ್ಗೆ ಚರ್ಚೆಯೂ ನಡೆಯುತು. ಆದ್ದರಿಂದ ಮತ್ತೆ ಅದನ್ನೇ ಇಲ್ಲಿ ಹೇಳುವ ಗೋಜಿಗೆ ಹೋಗುವುದಿಲ್ಲ. ಆದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಸರ್ಕಾರದವರು ಇನ್ನೂ ಕೊಡಲಿಲ್ಲ. ಮಂತ್ರಿಗಳು ಆದರ ಬಗ್ಗೆ ಏನೂ ಮಾತನಾಡದೆ ಸುಮ್ಮನೆ ಕುಳಿತಿದ್ದಾರೆ. ದಯವಿಟ್ಟು ಆದರ ಬಗ್ಗೆ ಸರ್ಕಾರದವರು ಸ್ಪಷ್ಟವಾದ ಅಭಿಪ್ರಾಯವನ್ನು ಕೊಡಬೇಕು. ಆದರ ಮುಖ್ಯ ಅಂಶವನ್ನು ನಾವು ಈ ಸಭೆಯಲ್ಲಿ ಪದೇ ಪದೇ ಹೇಳಿದ್ದೇವೆ. ಆದ್ದರಿಂದ ಈ ಸಭೆಯ ಅಮೂಲ್ಯ ಕಾಲವನ್ನು ವ್ಯರ್ಥ ಕಳೆಯುವುದಕ್ಕೆ ನಮಗೆ ಇಷ್ಟವಿಲ್ಲ ಈ ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಕೂಡಲೇ ಅವಕಾಶ ಕೊಡಬೇಕೆಂದು ನಾನು ಮತ್ತೆ ಹೇಳುತ್ತೇನೆ.

Mr. SPEAKER.—I shall give my ruling upon it either tomorrow or day-after tomorrow.